# ಕರ್ನಾಟಕ ವಿಧಾನ ಪರಿಷತ್ತು
## 150ನೇ ಅಧಿವೇಶನ
### *ಸಂತಾಪ ಸೂಚನೆ*

*ಮಾನ್ಯ ಸಭಾಪತಿಯವರು:-*

ವಿಧಾನ ಪರಿಷತ್ತಿನ ಮಾಜಿ ಸದಸ್ಯರಾದ ಶ್ರೀಮತಿ ರತ್ನ ವಿ ಕುಶನೂರ, ವಿಧಾನ ಸಭೆಯ ಮಾಜಿ ಸದಸ್ಯರು ಹಾಗೂ ಸಚಿವರುಗಳಾದ ಶ್ರೀ ಅಂಜನಮೂರ್ತಿ ಮತ್ತು ಶ್ರೀ ಡಿ.ಬಿ.ಇನಾಮದಾರ, ಲೋಕ ಸಭೆಯ ಮಾಜಿ ಸದಸ್ಯರು ಹಾಗೂ ವಿಧಾನಸಭೆಯ ಮಾಜಿ ಸದಸ್ಯರಾದ ಶ್ರೀ ಆರ್.ಧ್ರುವನಾರಾಯಣ, ವಿಮರ್ಶಕ, ಹಿರಿಯ ಸಾಹಿತಿ ಹಾಗೂ ಸಂಪಾದಕರಾದ ಪ್ರೊ. ಮಲೆಯೂರು ಗುರುಸ್ವಾಮಿ, ಅಂತರಾಷ್ಟ್ರೀಯ ಖ್ಯಾತಿಯ ತೊಗಲು ಗೊಂಬೆಯಾಟದ ಕಲಾವಿದರಾದ ನಾಡೋಜ ಬೆಳಗಲ್ಲು ವೀರಣ್ಣ, ಹಿರಿಯ ಸಾಹಿತಿ ಶ್ರೀ ಶ್ರೀನಿವಾಸ ವೈದ್ಯ, ಹೆಸರಾಂತ ನೇತ್ರ ತಜ್ಞರಾದ ಡಾ: ಕೆ. ಭುಜಂಗಶೆಟ್ಟಿ, ವಿಮರ್ಶಕ ಲೇಖಕರಾದ ಪ್ರೊ: ಜಿ.ಹೆಚ್.ನಾಯಕ್ ಹಾಗೂ ನಾಡಿನ ಹಿರಿಯ ಚಲನಚಿತ್ರ ಸಾಹಿತಿಗಳು, ಚಲನಚಿತ್ರ ನಿರ್ದೇಶಕರು, ಸಂಭಾಷಣೆಕಾರರು, ನಟರು ಮತ್ತು ಕನ್ನಡ ಪರ ಹೋರಾಟಗಾರರಾದ ಶ್ರೀ ಸಿ.ವಿ.ಶಿವಶಂಕರ್ ಅವರುಗಳು ನಿಧನರಾದುದನ್ನು ಈ ಸದನಕ್ಕೆ ತಿಳಿಸಲು ವಿಷಾಧಿಸುತ್ತೇನೆ.

## 1. ರತ್ನ ವಿ ಕುಶನೂರು

ವಿಧಾನ ಪರಿಷತ್ತಿನ ಮಾಜಿ ಸದಸ್ಯರಾದ ಶ್ರೀಮತಿ ರತ್ನ ವಿ ಕುಶನೂರು ಅವರು ದಿನಾಂಕ: **09.03.2023** ರಂದು ನಿಧನ ಹೊಂದಿರುತ್ತಾರೆ.

1941ನೇ ಏಪ್ರಿಲ್, 01ರಂದು ಬೀದರ್‌ನಲ್ಲಿ ಜನಿಸಿದ್ದ ಶ್ರೀಯುತರು ಬಿ.ಎ.ಎಲ್.ಎಲ್.ಬಿ., ಪದವೀಧರರಾಗಿದ್ದು, ವೃತ್ತಿಯಲ್ಲಿ ಕೃಷಿಕರಾಗಿದ್ದರು. ಸಮಾಜ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದ ಇವರು 2002--2008ರ ಅವಧಿಗೆ ವಿಧಾನ ಸಭೆಯ ಕ್ಷೇತ್ರದಿಂದ ವಿಧಾನ ಪರಿಷತ್ತಿನ ಸದಸ್ಯರಾಗಿ ಆಯ್ಕೆಯಾಗಿ ಸೇವೆಯನ್ನು ಸಲ್ಲಿಸಿರುತ್ತಾರೆ.

ಶ್ರೀಯುತರು ಬೀದರ್ ಮಹಿಳಾ ಬ್ಯಾಂಕ್ ಅಧ್ಯಕ್ಷರಾಗಿ, ಮಹಿಳಾ ಮಂಡಲ ಬೀದರ್‌ನ ಅಧ್ಯಕ್ಷರಾಗಿ ಹಾಗೂ ವಿವಿಧೊದ್ದೇಶ ಸಹಕಾರ ಸಂಘ, ಬೀದರ್ ಅಧ್ಯಕ್ಷರಾಗಿಯು ಸೇವೆಯನ್ನು ಸಲ್ಲಿಸಿದ್ದರು.

ಶ್ರೀಯುತರ ನಿಧನದಿಂದಾಗಿ ಒಬ್ಬ ಹಿರಿಯ ರಾಜಕಾರಣಿಯನ್ನು ಕಳೆದುಕೊಂಡಂತಾಗಿದೆ.

## 2. ಅಂಜನಮೂರ್ತಿ

**ವಿಧಾನ ಸಭೆಯ ಮಾಜಿ ಸದಸ್ಯರು ಉಪ ಸಭಾಧ್ಯಕ್ಷರು ಹಾಗೂ ಸಚಿವರಾಗಿದ್ದ ಶ್ರೀ ಅಂಜನಮೂರ್ತಿ ಅವರು ದಿನಾಂಕ: 23.03.2023ರಂದು ನಿಧನ ಹೊಂದಿರುತ್ತಾರೆ.**

1941ನೇ ಏಪ್ರಿಲ್, 10ರಂದು ನೆಲಮಂಗಲದಲ್ಲಿ ಜನಿಸಿದ್ದ ಶ್ರೀಯುತರು ಕಲಾ ಹಾಗೂ ಕಾನೂನು ಪದವೀಧರರಾಗಿದ್ದು, ವೃತ್ತಿಯಲ್ಲಿ ವಕೀಲರಾಗಿದ್ದರು. ಶ್ರೀಯುತರು 9, 10 ಮತ್ತು 11ನೇ ವಿಧಾನ ಸಭೆಗೆ ಸತತವಾಗಿ ಮೂರು ಬಾರಿ ವಿಧಾನಸಭೆಗೆ ಚುನಾಯಿತರಾಗಿ ಸೇವೆಯನ್ನು ಸಲ್ಲಿಸಿರುತ್ತಾರೆ. 1993–94ರಲ್ಲಿ ವಿಧಾನಸಭೆಯ ಉಪಾಧ್ಯಕ್ಷರಾಗಿ, ನಂತರ 2005–2006ರ ಅವಧಿಯಲ್ಲಿ ವಸತಿ ಸಚಿವರಾಗಿ ರಾಜ್ಯದ ಸಾವಿರಾರು ಜನರಿಗೆ ವಸತಿ ಕಲ್ಪಿಸಿ ಬಡವರ ಬಂಧು ಎಂದೇ ಖ್ಯಾತಿಯನ್ನು ಪಡೆದಿದ್ದರು.

ಶ್ರೀಯುತರು ತಾಲ್ಲೂಕು ಅಭಿವೃದ್ಧಿ ಮಂಡಳಿ ಸದಸ್ಯರಾಗಿ, ನೆಲಮಂಗಲ ವಕೀಲರ ಸಂಘದ ಅಧ್ಯಕ್ಷರಾಗಿ, ನೆಲಮಂಗಲ ಅರುಂಧತಿ ವಿದುವಾ ಸಂಸ್ಥೆಯ ಅಧ್ಯಕ್ಷರಾಗಿ, ಲ್ಯಾಂಡ್ ಟ್ರಿಬ್ಯೂನಲ್ ಸದಸ್ಯರಾಗಿ ಕಾರ್ಯನಿರ್ವಹಿದ್ದ ಶ್ರೀಯುತರು ಹಲವಾರು ಸಮಾಜ ಮುಖಿ ಕಾರ್ಯಗಳಲ್ಲಿ ತೊಡಗಿಸಿಕೊಂಡು ಸೇವೆಯನ್ನು ಸಲ್ಲಿಸಿರುತ್ತಾರೆ. ಮೈಸೂರು ಮಹಾರಾಜರಿಂದ ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದ ವರ್ಗಗಳ ಅಭಿವೃದ್ಧಿಗೆ ಶ್ರಮಿಸಿ 'ಲೋಕಸೇವಾನಿರತ' ಎಂಬ ಬಿರುದಿಗೆ ಭಾಜನರಾಗಿದ್ದರು.

**ಶ್ರೀಯುತರ ನಿಧನದಿಂದಾಗಿ ಒಬ್ಬ ಹಿರಿಯ ಸರಳ ಸಜ್ಜನ ರಾಜಕಾರಣಿಯನ್ನು ಕಳೆದುಕೊಂಡಂತಾಗಿದೆ.**

## 3. ಡಿ.ಬಿ.ಇನಾಮದಾರ

**ವಿಧಾನ ಸಭೆಯ ಮಾಜಿ ಸದಸ್ಯರು ಹಾಗೂ ಸಚಿವರಾಗಿದ್ದ ಶ್ರೀ ಡಿ.ಬಿ.ಇನಾಮದಾರ ಅವರು ದಿನಾಂಕ: 25.04.2023ರಂದು ನಿಧನ ಹೊಂದಿರುತ್ತಾರೆ.**

**1948ನೇ ಜುಲೈ, 02ರಂದು ಬೆಳಗಾವಿ ಜಿಲ್ಲೆಯ ನೇಗಿನಹಾಳ ಗ್ರಾಮದಲ್ಲಿ ಜನಿಸಿದ್ದ ಶ್ರೀಯುತರು** ಶ್ರೀಯುತರು ಬಿ.ಎಸ್ಸಿ., ವರೆಗೆ ವ್ಯಾಸಂಗವನ್ನು ಮಾಡಿ ವೃತ್ತಿಯಲ್ಲಿ ಕೃಷಿಕರಾಗಿದ್ದರು. 1983ರಲ್ಲಿ ಪ್ರಥಮ ಬಾರಿಗೆ ತಮ್ಮ 33ನೇ ವಯಸ್ಸಿನಲ್ಲಿಯೇ ವಿಧಾನಸಭೆಗೆ ಆಯ್ಕೆಯಾಗಿ ಸೇವೆ ಸಲ್ಲಿಸಿದ್ದ ಶ್ರೀಯುತರು 1985, 1994, 1999 ಮತ್ತು 2013ರಲ್ಲಿ ಹೀಗೆ ಒಟ್ಟು 5 ಬಾರಿ ವಿಧಾನ ಸಭೆಗೆ

ಆಯ್ಕೆಯಾಗಿ ಸೇವೆಯನ್ನು ಸಲ್ಲಿಸಿದ್ದ ಶ್ರೀಯುತರು 1983ರಲ್ಲಿ ರಾಮಕೃಷ್ಣ ಹೆಗಡೆ ಅವರ ಸಂಪುಟದಲ್ಲಿ ಗಣಿ ಮತ್ತು ಭೂ ವಿಜ್ಞಾನ ಖಾತೆ ಸಚಿವರಾಗಿ, 1985ರಲ್ಲಿ ಆರೋಗ್ಯ ಸಚಿವರಾಗಿ, 1999ರಲ್ಲಿ ಎಸ್.ಎಂ.ಕೃಷ್ಣ ಅವರು ಸಂಪುಟದಲ್ಲಿ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರಾಗಿ ಹಾಗೂ 2000ರಲ್ಲಿ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ಪ್ರವಾಸೋದ್ಯಮ ಸಚಿವರಾಗಿ ಸೇವೆಯನ್ನು ಸಲ್ಲಿಸಿದ್ದರು. ಪ್ರಸ್ತುತ ಕಿತ್ತೂರು ರಾಣಿ ಚೆನ್ನಮ್ಮ ಸ್ಮಾರಕ ಸಮಿತಿಯ ವಸತಿ ಸೈನಿಕ ಶಾಲೆಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದರು. 1978ರಲ್ಲಿ ಮಲಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆ ಅಧ್ಯಕ್ಷರಾಗಿ, ಸುಮಾರು 7 ರಿಂದ 8 ಬಾರಿಗೆ ಅಧ್ಯಕ್ಷರಾಗಿ ಸೇವೆ ಸಲ್ಲಿಸಿರುತ್ತಾರೆ.

**ಶ್ರೀಯುತರ ನಿಧನದಿಂದಾಗಿ ಒಬ್ಬ ಹಿರಿಯ ಸಜ್ಜನ ರಾಜಕಾರಣಿಯನ್ನು ಕಳೆದುಕೊಂಡಂತಾಗಿದೆ.**

## 04. ಆರ್.ಧ್ರುವನಾರಾಯಣ

**ವಿಧಾನ ಸಭೆಯ ಮಾಜಿ ಸದಸ್ಯರು ಹಾಗೂ ಮಾಜಿ ಸಂಸದರಾಗಿದ್ದ ಶ್ರೀ ಆರ್.ಧ್ರುವನಾರಾಯಣ ಅವರು ದಿನಾಂಕ: 11.03.2023ರಂದು ನಿಧನ ಹೊಂದಿರುತ್ತಾರೆ.**

1961ನೇ ಜುಲೈ, 31ರಂದು ಚಾಮರಾಜನಗರ ಜಿಲ್ಲೆಯ ಹೆಗ್ಗವಾಡಿಯಲ್ಲಿ ಜನಿಸಿದ್ದ ಶ್ರೀಯುತರು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದಿಂದ ಕೃಷಿಯಲ್ಲಿ ಸ್ನಾತಕೋತ್ತರ ಪದವೀಧರರಾಗಿದ್ದು, ವೃತ್ತಿಯಲ್ಲಿ ಕೃಷಿಕರು ಹಾಗೂ ವ್ಯಾಪಾರೋದ್ಯಮಿಯಾಗಿದ್ದರು. 2004 ಮತ್ತು 2008ರಲ್ಲಿ ವಿಧಾನಸಭೆಯ ಸದಸ್ಯರಾಗಿ ಹಾಗೂ 15 & 16ನೇ ಲೋಕಸಭೆಯ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದರು. ಎನ್ಎಸ್.ಯು.ಐ, ರಾಜ್ಯ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಯಾಗಿ, ಕೆಪಿಸಿಸಿ ಕಾರ್ಯಕಾರಿ ಸಮಿತಿ ಸದಸ್ಯರಾಗಿ, 1994 ರಿಂದ 1997ರವರೆಗೆ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯರಾಗಿ ಮತ್ತು 2000 ರಿಂದ 2006ರವರೆಗೆ ಕಾವೇರಿ ಗ್ರಾಮೀಣ ಬ್ಯಾಂಕಿನ ಆಡಳಿತ ಮಂಡಳಿ ನಿರ್ದೇಶಕರಾಗಿಯೂ ಸೇವೆಯನ್ನು ಸಲ್ಲಿಸದ್ದರು.

ಶ್ರೀಯುತರು ತಮ್ಮ ರಾಜಕೀಯ ವಿರೋಧಿಗಳ ಹೃದಯವನ್ನು ತಮ್ಮ ಸರಳ ಸಜ್ಜನಿಕೆಯ ನಡೆ, ನುಡಿಯಿಂದಲೇ ಗೆದ್ದು ಅಜಾತಶತ್ರು ಎಂದೆಣಿಸಿದ್ದರು.

ಶ್ರೀಯುತರ ನಿಧನದಿಂದಾಗಿ ಸರಳ ಸಜ್ಜನಿಕೆಯ ನಡೆ ನುಡಿಯ ರಾಜಕಾರಣಿಯೊಬ್ಬರನ್ನು ಕಳೆದುಕೊಂಡಂತಾಗಿದೆ.

## 5. ಪ್ರೊ: ಮಲೆಯೂರು ಗುರುಸ್ವಾಮಿ

**ವಿಮರ್ಶಕ, ಹಿರಿಯ ಸಾಹಿತಿ, ವಾಗ್ಮಿ, ಕಾದಂಬರಿಕಾರ ಮತ್ತು ಸಂಪಾದಕರಾಗಿದ್ದ ಪ್ರೋ: ಮಲೆಯೂರು ಗುರುಸ್ವಾಮಿ ಅವರು ದಿನಾಂಕ:09.03.2023ರಂದು ನಿಧನ ಹೊಂದಿರುತ್ತಾರೆ.**

1947ರ ಆಗಸ್ಟ್ 1ರಂದು ಚಾಮರಾಜನಗರ ತಾಲ್ಲೂಕಿನ ಮಲೆಯೂರು ಗ್ರಾಮದಲ್ಲಿ ಜನಿಸಿದ್ದ ಶ್ರೀಯುತರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದಿದ್ದ ಇವರು ಜೆ.ಎಸ್.ಎಸ್. ಶಿಕ್ಷಣ ಸಂಸ್ಥೆಯಲ್ಲಿ ಮೂರು ದಶಕಗಳ ಕಾಲ ಉಪನ್ಯಾಸಕರಾಗಿ ಸೇವೆಯನ್ನು ಸಲ್ಲಿಸಿದ್ದರು.

ಚಾಮರಾಜನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾಗಿ 09 ವರ್ಷ, ಮೈಸೂರು ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷರಾಗಿ 05 ವರ್ಷಗಳ ಕಾಲ ಸೇವೆ ಸಲ್ಲಿಸಿರುವುದಲ್ಲದೆ, ಮಲೆ ಮಹದೇಶ್ವರ ಬೆಟ್ಟದ ಜಾನಪದ ಸಂಶೋಧನಾ ಕೇಂದ್ರದ ಸದಸ್ಯರಾಗಿ, ಕರ್ನಾಟಕ ಗೆಜೆಟಿಯರ್ಸ್ ಸದಸ್ಯರಾಗಿ ಗ್ರಾಮ ವಿಶ್ವಕೋಶದ ಜಿಲ್ಲಾ ಸಂಪಾದಕರಾಗಿ, ಮೈಸೂರು ವಿಶ್ವವಿದ್ಯಾನಿಲಯದ ಬಸವ ಪೀಠದ ಪ್ರಾಧ್ಯಾಪಕರಾಗಿಯೂ ಸೇವೆಯನ್ನು ಸಲ್ಲಿಸಿದ್ದರು.

ಚರಿತ್ರೆಯ ಪುಟಕ್ಕೆ ಒಂದು ಟಿಪ್ಪಣಿ, ಕಪಿಲೆ ಹರಿದಳು ಕಡಲಿಗೆ, ಸಂಸ ಮತ್ತು ಬಂಗಾರದೊಡ್ಡಿ ಕಾದಂಬರಿಗಳನ್ನು ಬರೆದಿರುತ್ತಾರೆ. ಸಾಹಿತ್ಯ ಸುವರ್ಣಾವತಿ, ಪ್ರಭುಲಿಂಗಲೀಲೆ, ಬಸವಣ್ಣ, ಕಪಿಲಾನದಿಯ ಎಡಬಲದಿ, ಹೊನ್ನಹೊಳೆ, ಮಾತಿನೊಳಗಣ ಮೌನ, ಶರಣಕಿರಣ ವ್ಯಕ್ತಿಚಿತ್ರ ಹಾಗೂ ಮಾತೆಂಬುದು ಜ್ಯೋತಿರ್ಲಿಂಗ ಇವರ ಇತರ ಕೃತಿಗಳಾಗಿರುತ್ತವೆ.

ಮಹಾಮನೆ ಎಂಬ ಅಭಿನಂದನಾ ಗ್ರಂಥಕ್ಕೆ 2006ರಲ್ಲಿ ಪುರಸ್ಕಾರ ಪ್ರಶಸ್ತಿ, ಮಹಾಕವಿ ಷಡಕ್ಷರ ದೇವ ಸ್ಮಾರಕ ಪ್ರಶಸ್ತಿ, ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ, 2010ರಲ್ಲಿ ಕನ್ನಡ ರಾಜ್ಯೋತ್ಸವ ಪ್ರಶಸ್ತಿಗಳಿಗೆ ಭಾಜನರಾಗಿರುತ್ತಾರೆ.

**ಶ್ರೀಯುತರ ನಿಧನದಿಂದಾಗಿ ರಾಜ್ಯವು ಹಿರಿಯ ಸಾಹಿತಿಯನ್ನು ಕಳೆದುಕೊಂಡಂತಾಗಿದೆ.**

## 6. ನಾಡೋಜ ಬೆಳಗಲ್ಲು ವೀರಣ್ಣ

**ತೊಗಲು ಗೊಂಬೆಯಾಟದ ಮೂಲಕ ರಾಷ್ಟ್ರೀಯ ಅಂತರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಪಡೆದಿದ್ದ ಕಲಾವಿದರಾದ ನಾಡೋಜ ಬೆಳಗಲ್ಲು ವೀರಣ್ಣ ಅವರು ದಿನಾಂಕ:02.04.2023ರಂದು ನಿಧನ ಹೊಂದಿರುತ್ತಾರೆ.**

1935ರ ಅಕ್ಟೋಬರ್ 6 ರಂದು ಬಳ್ಳಾರಿ ತಾಲ್ಲೂಕಿನ ಬೆಳಗಲ್ಲು ಗ್ರಾಮದಲ್ಲಿ ಜನಿಸಿದ್ದ ಶ್ರೀಯುತರು ತಂದೆಯ ಹಾದಿಯಲ್ಲೇ ರಂಗಭೂಮಿ ಪ್ರವೇಶಿಸಿದ್ದು, ಹಲವು ನಾಟಕ ಕಂಪನಿಗಳಲ್ಲಿ ಗಾಯಕರಾಗಿ, ಪೌರಾಣಿಕ, ಐತಿಹಾಸಿಕ ಹಾಗೂ ಸಾಮಾಜಿಕ ನಾಟಕಗಳಲ್ಲಿ ಬಾಲನಟರಾಗಿ, ಸ್ತ್ರೀ ಪಾತ್ರಧಾರಿಯಾಗಿ ಹಾಗೂ ತೊಗಲು ಗೊಂಬೆಯಾಟದಲ್ಲಿ ರಾಷ್ಟ್ರ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ಅಪ್ರತಿಮ ಸಾಧನೆ ಮಾಡಿದ್ದ ಶ್ರೀಯುತರು ಬಯಲಾಟ ಅಕಾಡೆಮಿಯ ಅಧ್ಯಕ್ಷರಾಗಿಯು ಸಹ ಸೇವೆಯನ್ನು ಸಲ್ಲಿಸಿದ್ದರು.

ಶ್ರೀಯುತರು ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ, 1992ರಲ್ಲಿ ರಾಜ್ಯೋತ್ಸವ ಪ್ರಶಸ್ತಿ, 1991ರಲ್ಲಿ ಕನ್ನಡ ವಿಶ್ವವಿದ್ಯಾಲಯದ ನಾಡೋಜ ಪ್ರಶಸ್ತಿಗೆ, 2014ರಲ್ಲಿ ರಾಷ್ಟ್ರಪತಿ ಪ್ರಶಸ್ತಿಗಳಿಗೆ ಭಾಜನರಾಗಿರುತ್ತಾರೆ.

**ಶ್ರೀಯುತರ ನಿಧನದಿಂದಾಗಿ ರಾಜ್ಯವು ಪ್ರಸಿದ್ಧ ತೊಗಲು ಗೊಂಬೆಯಾಟದ ಕಲಾವಿದರೊಬ್ಬರನ್ನು ಕಳೆದುಕೊಂಡಂತಾಗಿದೆ.**

## 7. ಶ್ರೀನಿವಾಸ ವೈದ್ಯ

**ಖ್ಯಾತ ಸಾಹಿತಿ ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತರಾದ ಶ್ರೀ ಶ್ರೀನಿವಾಸ ವೈದ್ಯ ಅವರು ದಿನಾಂಕ:21.04.2023 ರಂದು ನಿಧನ ಹೊಂದಿರುತ್ತಾರೆ.**

ದಿನಾಂಕ:04.04.1936ರಂದು ಧಾರವಾಡ ಜಿಲ್ಲೆಯ ನವಲಗುಂದದಲ್ಲಿ ಜನಿಸಿದ ಶ್ರೀಯುತರು ಅರ್ಥಶಾಸ್ತ್ರ ಮತ್ತು ರಾಜ್ಯಶಾಸ್ತ್ರದಲ್ಲಿ ಎಂ.ಎ. ಪದವೀಧರರಾಗಿದ್ದ ಇವರು ಕೆನರಾ ಬ್ಯಾಂಕಿನಲ್ಲಿ ಸಹಾಯಕ ಜನರಲ್ ಮ್ಯಾನೇಜರ್ ಆಗಿಯು ಸೇವೆಯನ್ನು ಸಲ್ಲಿಸಿದ್ದರು. ಕನ್ನಡದ

ಅಪರಂಜಿ ಹಾಸ್ಯ ಪತ್ರಿಕೆಯ ಬರಹಗಾರರಾಗಿದ್ದ ಇವರು "ಸಂವಾದ" ಎನ್ನುವ ಸಾಂಸ್ಕೃತಿಕ ಸಂಘಟನೆ ಸ್ಥಾಪಿಸಿದ್ದರು.

ತಲೆಗೊಂದು ತರತರ, ಮನಸುಖರಾಯನ ಮನಸ್ಸು, ರುಚಿಗೆ ಹುಳಿಯೊಗರು (ಲಲಿತ ಪ್ರಬಂಧಗಳು), ಹಳ್ಳ ಬಂತು ಹಳ್ಳ(ಕಾದಂಬರಿ), ಅಗ್ನಿಕಾರ್ಯ (ಸಣ್ಣ ಕಥೆಗಳು), ಮೊದಲ ಓದು (ಆಯ್ದ ಕಥೆಗಳು) ಕಪ್ಪೆ ನುಂಗಿದ ಹುಡುಗ (ಕಥೆಗಳು) ಇವುಗಳು ಶ್ರೀಯುತರ ಪ್ರಮುಖ ಕೃತಿಗಳಾಗಿವೆ.

ಮನಸುಖರಾಯನ ಮನಸ್ಸು ಕೃತಿಗೆ ಪರಮಾನಂದ ಪ್ರಶಸ್ತಿ, ಹಳ್ಳ ಬಂತು ಹಳ್ಳ ಕಾದಂಬರಿಗೆ 2004ರಲ್ಲಿ ಕರ್ನಾಟಕ ರಾಜ್ಯ ಅಕಾಡೆಮಿ ಪ್ರಶಸ್ತಿ, 2008ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಹಾಗೂ 2010ರಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗಳಿಗೆ ಶ್ರೀಯುತರು ಭಾಜನರಾಗಿದ್ದರು.

**ಶ್ರೀಯುತರ ನಿಧನದಿಂದಾಗಿ ರಾಜ್ಯವು ಹಿರಿಯ ಸಾಹಿತಿಯೊಬ್ಬರನ್ನು ಕಳೆದುಕೊಂಡಂತಾಗಿದೆ.**

## 8. ಡಾ: ಕೆ. ಭುಜಂಗ ಶೆಟ್ಟಿ

**ಖ್ಯಾತ ನೇತ್ರ ತಜ್ಞ ಹಾಗೂ ನಾರಾಯಣ ನೇತ್ರಾಲಯದ ಸಂಸ್ಥಾಪಕರಾಗಿದ್ದ ಡಾ: ಕೆ. ಭುಜಂಗ ಶೆಟ್ಟಿ ಅವರು ದಿನಾಂಕ: 19.05.2023ರಂದು ನಿಧನ ಹೊಂದಿರುತ್ತಾರೆ.**

ಡಾ: ಕೆ.ಭುಜಂಗ ಶೆಟ್ಟಿ ಅವರು ಕುಂದಾಪುರ ಬಳಿಯ ಹಳ್ಳಿಯೊಂದರಲ್ಲಿ ಜನಿಸಿದ್ದ ಶ್ರೀಯುತರು 1978ರಲ್ಲಿ ಬೆಂಗಳೂರು ವೈದ್ಯಕೀಯ ಕಾಲೇಜಿನಿಂದ ಎಂ.ಬಿ.ಬಿ.ಎಸ್ ಪದವಿ ಪಡೆದಿದ್ದರು. ಕಣ್ಣಿನ ಪೊರೆ ಮತ್ತು ಫಾಕೋಎಮಲ್ಸಿಫಿಕೇಶನ್ ಶಸ್ತ್ರಚಿಕಿತ್ಸೆಯಲ್ಲಿ ನೈಪುಣ್ಯ ಹೊಂದಿದ್ದ ಶ್ರೀಯುತರು ಬೆಂಗಳೂರು ವೈದ್ಯಕೀಯ ಕಾಲೇಜಿನ ಮಿಂಟೋ ಆಪ್ತಾಲ್ಮಿಕ್ ಆಸ್ಪತ್ರೆಯಲ್ಲಿ ನೇತ್ರಶಾಸ್ತ್ರದ ವೈದ್ಯರಾಗಿ ಸೇವೆ ಸಲ್ಲಿಸಿದ್ದರು. 1993ರಲ್ಲಿ ರಾಜಾಜಿನಗರದಲ್ಲಿ ನಾರಾಯಣ ನೇತ್ರಾಲಯದ ಸಂಸ್ಥಾಪಕರು ಹಾಗೂ ಅಧ್ಯಕ್ಷರಾಗಿ ಸೇವೆ ಸಲ್ಲಿಸಿ ಕರ್ನಾಟಕದ ಅತಿದೊಡ್ಡ ಸೂಪರ್ ಸ್ಪೆಷಾಲಿಟಿ ಕಣ್ಣಿನ ಆಸ್ಪತ್ರೆಯಾಗಿ ಪರಿವರ್ತಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ.

ನೇತ್ರದಾನದ ಬಗ್ಗೆ ಜಾಗೃತಿಯನ್ನು ಮೂಡಿಸಿದ್ದ ಶ್ರೀಯುತರು ನೇತ್ರ ಚಿಕಿತ್ಸೆಯ ಮೂಲಕ ಅಸಂಖ್ಯಾತ ಅಂಧರ ಬಾಳಿಗೆ ಬೆಳಕಾಗಿದ್ದರಲ್ಲದೇ, ಮಧುಮೇಹದ ಬಗ್ಗೆಯು ಜಾಗೃತಿಯನ್ನು ಮೂಡಿಸುವಲ್ಲಿ ಪ್ರಚಾರ ಕೈಗೊಂಡಿದ್ದರು. 2010ರಲ್ಲಿ ಪ್ರತಿಷ್ಠಿತ ರಾಜ್ಯೋತ್ಸವ ಪ್ರಶಸ್ತಿ ಸೇರಿದಂತೆ ಹತ್ತು ಹಲವಾರು ಪ್ರಶಸ್ತಿ ಪುರಸ್ಕಾರಗಳಿಗೆ ಭಾಜನರಾಗಿದ್ದ ಶ್ರೀಯುತರು ರಾಜ್ಯ ಕಂಡ ಶ್ರೇಷ್ಠ ವೈದ್ಯರಲ್ಲಿ ಒಬ್ಬರಾಗಿದ್ದರು.

ಶ್ರೀಯುತರ ನಿಧನದಿಂದಾಗಿ ರಾಜ್ಯವು ಹೆಸರಾಂತ ನೇತ್ರ ತಜ್ಞರೊಬ್ಬರನ್ನು ಕಳೆದುಕೊಂಡಂತಾಗಿದೆ.

## 9. ಪ್ರೊ: ಜಿ.ಎಚ್.ನಾಯಕ

**ಖ್ಯಾತ ವಿಮರ್ಶಕ, ಲೇಖಕರಾದ ಪ್ರೊ: ಜಿ.ಎಚ್. ನಾಯಕ್ ಅವರು ದಿನಾಂಕ:26.05.2023ರಂದು ನಿಧನ ಹೊಂದಿರುತ್ತಾರೆ.**

ಉತ್ತರ ಕನ್ನಡ ಜಿಲ್ಲೆ, ಅಂಕೋಲ ತಾಲ್ಲೂಕಿನ ಸೂರ್ವೆಯಲ್ಲಿ 1935ರ ಸೆಪ್ಟೆಂಬರ್ 18 ರಂದು ಜನಿಸಿದ್ದ ಶ್ರೀಯುತರು ಕನ್ನಡ ಸಾಹಿತ್ಯ ಲೋಕದಲ್ಲಿ ಜಿ.ಎಚ್.ನಾಯಕ್ ಎಂದು ಚಿರಪರಿಚಿತರಾಗಿದ್ದರು. ಮೈಸೂರು ವಿಶ್ವವಿದ್ಯಾಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಅಧ್ಯಾಪಕರಾಗಿ ಸೇವೆಯನ್ನು ಸಲ್ಲಿಸಿದ್ದರು. 20ನೇ ವಯಸ್ಸಿನಲ್ಲೇ ಚಲೇಜಾವ್ ಚಳುವಳಿಯಲ್ಲಿ ಭಾಗವಹಿಸಿದ್ದ ಇವರು ಹಲವಾರು ಸಾಮಾಜಿಕ ಹೋರಾಟಗಳಲ್ಲಿ ಸಕ್ರಿಯರಾಗಿದ್ದ ಶ್ರೀಯುತರು ವಿಮರ್ಶೆಯ ಜತೆಗೆ ಸಂಪಾದನೆ, ಸಣ್ಣಕಥೆಗಳು, ಹೊಸಗನ್ನಡ ಕವಿತೆಗಳನ್ನೂ ರಚಿಸಿದ್ದರು.

ಬಾಳು ಎನ್ನುವುದು ಅವರ ಆತ್ಮಕಥನ. ಸಮಕಾಲೀನ, ಅನಿವಾರ್ಯ, ನಿರಪೇಕ್ಷೆ, ನಿಜದನಿ, ವಿನಯ ವಿಮರ್ಶೆ, ಸಕಾಲಿಕ, ಗುಣಗೌರವ, ಹರಿಶ್ಚಂದ್ರ ಕಾವ್ಯ, ಓದು-ವಿಮರ್ಶೆ, ಕೃತಿ ಸಾಕ್ಷಿ, ಸ್ಥಿತಿ ಪ್ರಜ್ಞೆ, ಮತ್ತೆ ಮತ್ತೆ ಪಂಪ, ಸಾಹಿತ್ಯ ಸಮೀಕ್ಷೆ, ಉತ್ತರಾರ್ಧ ಇವುಗಳು ಶ್ರೀಯುತರ ಪ್ರಮುಖ ಕೃತಿಗಳು. ಶ್ರೀ ರಾಮಾಯಣ ದರ್ಶನಂ ಕುವೆಂಪು ಸ್ವಹಸ್ತಾಕ್ಷ ಪ್ರತಿ, ಆತ್ಮಕಥನ-ಬಾಳು, ಕನ್ನಡ ಸಾಹಿತ್ಯ ಕೃತಿಗಳಿಗೆ ಸಂಪಾದಕರೂ ಆಗಿದ್ದರು.

ಪ್ರಗತಿಪರ ಚಿಂತಕರು, ಸೌಜನ್ಯಶೀಲ, ನಿಷ್ಠುರ ವಿಮರ್ಶಕರಾಗಿ ಅಪ್ಪಟ ಮಾನವೀಯ ಮನಸ್ಸುಳ್ಳವರಾಗಿದ್ದರು. ಶ್ರೀಯುತರ ಉತ್ತರಾರ್ಧ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ನಿರಪೇಕ್ಷ, ವಿಮರ್ಶಾ ಕೃತಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ನಿಜದನಿ ವಿಮರ್ಶಾ ಕೃತಿಗೆ ವಿ.ಎಂ. ಇನಾಂದಾರ ಸ್ಮಾರಕ ಪ್ರಶಸ್ತಿಗೆ ಹಾಗೂ 2010ನೇ ಸಾಲಿನ ಪಂಪ ಪ್ರಶಸ್ತಿಗಳಿಗೆ ಭಾಜನರಾಗಿದ್ದರು.

**ಶ್ರೀಯುತರ ನಿಧನದಿಂದಾಗಿ ರಾಜ್ಯವು ಕನ್ನಡ ಸಾಹಿತ್ಯ ಲೋಕದ ಹಿರಿಯ ಚಿಂತಕರೊಬ್ಬರನ್ನ ಕಳೆದುಕೊಂಡಂತಾಗಿದೆ.**

**10.ಸಿ.ವಿ. ಶಿವಶಂಕರ್**

**ನಾಡಿನ ಹಿರಿಯ ಚಲನಚಿತ್ರ ಸಾಹಿತಿಗಳು, ಚಲನಚಿತ್ರ ನಿರ್ದೇಶಕರು, ಸಂಭಾಷಣೆಕಾರರು, ನಟರು ಮತ್ತು ಕನ್ನಡ ಪರ ಹೋರಾಟಗಾರರಾದ ಶ್ರೀ ಸಿ.ವಿ. ಶಿವಶಂಕರ್ ರವರು ದಿನಾಂಕ: 27.06.2023ರಂದು ನಿಧನ ಹೊಂದಿರುತ್ತಾರೆ.**

1933ರ ಮಾರ್ಚ್, 23ರಂದು ತಿಪಟೂರಿನಲ್ಲಿ ಜನಿಸಿದ್ದ ಶ್ರೀಯುತರು ಚಿಕ್ಕಂದಿನಿಂದಲೇ ಸಾಹಿತ್ಯ, ನಾಟಕಗಳಲ್ಲಿ ಅಪಾರವಾದ ಅಸಕ್ತಿಯನ್ನು ಹೊಂದಿದ್ದರು.

"ಸಿರಿವಂತನಾದರೂ ಕನ್ನಡ ನಾಡಲ್ಲೇ ಮೆರೆವೆ, ಭಿಕ್ಷುಕನಾದರು ಕನ್ನಡನಾಡಲ್ಲೇ ಮಡಿವೆ" ಎಂಬ ಅತ್ಯಂತ ಜನಪ್ರಿಯ ಚಲನಚಿತ್ರ ಗೀತೆಯಲ್ಲದೇ 'ಹೋಗದಿರಿ ಸೋದರರೇ', 'ನಾನ್ನೊಡಿ ನಲಿವ ಕಾರವಾರ', ಬೆಳದಿದೆ ನೋಡಾ ಬೆಂಗಳೂರು ನಗರ ಹೀಗೆ ಮುನ್ನೂರಕ್ಕೂ ಹೆಚ್ಚು ಚಲನಚಿತ್ರ ಗೀತೆಗಳನ್ನು ಬರೆದಿರುವ ಇವರು ಹತ್ತಾರು ಚಲನಚಿತ್ರಗಳನ್ನು ನಿರ್ದೇಶಿಸಿದ್ದಾರೆ. ಇದಲ್ಲದೇ ನಲವತ್ತಕ್ಕೂ ಹೆಚ್ಚು ಚಿತ್ರಗಳಿಗೆ ಸಂಭಾಷಣೆಕಾರರಾಗಿದ್ದಾರೆ. ದಿವಂಗತ ಹುಣಸೂರು ಕೃಷ್ಣಮೂರ್ತಿರವರ ಜೊತೆಯಲ್ಲಿ ಸಹಾಯಕ ನಿರ್ದೇಶಕರಾಗಿ ಕಾರ್ಯನಿರ್ವಹಿಸಿರುತ್ತಾರೆ. ತಮಿಳು ನಾಡಿನಲ್ಲಿ ಇದ್ದಂತಹ ಕನ್ನಡ ಕಲಾವಿದರಿಗೆ ಕನ್ನಡವನ್ನು ಕಲಿಸುತ್ತಿದ್ದಂತಹ ಶಿಕ್ಷಕರಾಗಿದ್ದರು. ಶ್ರೀಯುತರು ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಸಿಂಗಾನಲ್ಲೂರು ಪುಟ್ಟಸ್ವಾಮಯ್ಯ ರಾಜ್‌ಕುಮಾರ್ ಪ್ರಶಸ್ತಿ, ಕೆಂಪೇಗೌಡ ಪ್ರಶಸ್ತಿ, ಪುಟ್ಟಣ್ಣ ಕಣಗಾಲ್ ಪ್ರಶಸ್ತಿಗಳಿಗೆ ಭಾಜನರಾಗಿರುತ್ತಾರೆ.

**ಶ್ರೀಯುತರ ನಿಧನದಿಂದಾಗಿ ರಾಜ್ಯವು ಹಿರಿಯ ರಂಗಭೂಮಿ ಕಲಾವಿದ ಹಾಗೂ ಚಲನಚಿತ್ರ ನಟರೊಬ್ಬರನ್ನು ಕಳೆದುಕೊಂಡಂತಾಗಿದೆ.**

**<u>ಸಭಾನಾಯಕರು ಹಾಗೂ ವಿರೋಧ ಪಕ್ಷದ ನಾಯಕರು ಮಾತನಾಡಿದ ನಂತರ:-</u>**

ಮೃತರುಗಳ ಆತ್ಮಕ್ಕೆ ಸದ್ಗತಿಯನ್ನು ಕೋರುತ್ತಾ, ಅವರ ಅಗಲಿಕೆಯ ನೋವನ್ನು ಸಹಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ಪರಮಾತ್ಮನು ಕರುಣಿಸಲೆಂದು ಪ್ರಾರ್ಥಿಸುತ್ತೇನೆ.

ಮೃತರುಗಳ ಗೌರವಾರ್ಥ ಮಾನ್ಯ ಸದಸ್ಯರುಗಳು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

**(ಮೌನ ಆಚರಿಸಿದ ನಂತರ)**

ಸದನದಲ್ಲಿ ಪ್ರಸ್ತಾಪಿಸಿದ ಸಂತಾಪ ಸೂಚನೆಯನ್ನು ಮೃತ ಗಣ್ಯರ ಕುಟುಂಬ ವರ್ಗದವರಿಗೆ ಕಳುಹಿಸಲಾಗುವುದು.